ರಾಜೇಶ್ ದುರಂತದಲ್ಲಿ ಅಂತ್ಯ ಕಂಡ. ಅದೇ ಪರಿಸರದಿಂದ ಬಂದ ಹಲವು ಪ್ರತಿಭೆಗಳು ಇವತ್ತೂ ಬಣ್ಣದ ಲೋಕದಲ್ಲಿವೆ. ಝೀ ಕನ್ನಡದ ಸ್ಟಾರ್ ಸಿಂಗಲ್ ಮೂಲಕ ಬೆಳಕಿಗೆ ಬಂದ ಬೇಬಿ ಡಾಲ್ ಆದ್ಯಾ ಹಲವು ಸಿನಿಮಾಗಳಿಗೆ ಹಾಡಿದ್ದಾರೆ. ಜತೆಗೆ ಆಲ್ಬಂ ಕೂಡ ತಂದಿದ್ದಾರೆ. ಯುವ ಪ್ರತಿಭೆ ಸಂಚಿತ್ ಹೆಗಡೆ, ಅಂಕಿತಾ, ಮೆಹಬೂಬ್, ಚೆನ್ನಪ್ಪ ಮುಂತಾದ ಎಲೆಮರೆಯ ಕಾಯಿಯಂತೆ ಕಾಣದಂತಹ ಪ್ರತಿಭೆಗಳು ಉಜ್ವಲ ಬೆಳಕಿನಲ್ಲಿ ಪ್ರಜ್ವಲಿಸಿದ್ದು ರಿಯಾಲಿಟಿ ಷೋ ಎನ್ನುವ ಪೈಪೋಟಿಯ ಕಣದಲ್ಲಿ. ಇಂಡಿಯನ್ ರಿಯಾಲಿಟಿ ಷೋ ಗೆದ್ದ ಸುನಾಮಿ ಕಿಟ್ಟಿ ಜನಪ್ರಿಯತೆಯ ಉತ್ತುಂಗ ಶಿಖರವನ್ನೇ ಏರುವಂತೆ ಮಾಡಿತು. ಬಿಗ್‌ಬಾಸ್‌ನಿಂದ ವಿಜಯರಾಘವೇಂದ್ರ, ಶ್ರುತಿ ಅಂತಹ ಹಿರಿಯ ಪ್ರತಿಭೆಗಳು ಮತ್ತಷ್ಟು ಪ್ರಕಾಶಿಸುವಂತಾಯಿತು. ಮಾಧ್ಯಮ ಕ್ಷೇತ್ರದಲ್ಲಿ ಹೆಸರು ಮಾಡಿದ್ದ ಕಿರಿಕ್ ಕೀರ್ತಿಗೆ ಮನರಂಜನೆ ಕ್ಷೇತ್ರದಲ್ಲಿ ಅವಕಾಶಗಳ ಬಾಗಿಲು ತೆರೆದಿದ್ದು ಬಿಗ್‌ಬಾಸ್ ಎಂಬ ಕೀ ಮೂಲಕ. ಅದೇ ಷೋದಲ್ಲಿ ಪ್ರಥಮ ಸ್ಥಾನ ಗಿಟ್ಟಿಸಿದ ಪ್ರಥಮ್ ಕೂಡ ಸಾಮಾನ್ಯವರ್ಗದ ಪ್ರತಿನಿಧಿ ಎನ್ನುವುದು ಮುಖ್ಯ. ಬಿಗ್‌ಬಾಸ್ ಮೊದಲ ಸರಣಿಯಲ್ಲಿ ವೀಕ್ಷಕರ ಮನ್ನಣೆಗೆ ಪಾತ್ರವಾಗಿದ್ದ ಅರುಣ್ ಸಾಗರ್ ಅವರ ಕೀರ್ತಿಗೆ ಮುಕುಟವಾಗಿದ್ದು, ಅವರ ಬಹುಮುಖ ಪ್ರತಿಭೆ ಪ್ರಭೆಯಂತೆ ಪ್ರಕಾಶನಗೊಂಡಿದ್ದು ರಿಯಾಲಿಟಿ ಷೋನಲ್ಲಿ.

## ಒಂದಿಷ್ಟು ಸಿಹಿ, ಒಂದಿಷ್ಟು...

ಬಿಗ್‌ಬಾಸ್ ಸರಣಿ 6ರಲ್ಲಿ ಶಶಿಕುಮಾರ್ ಅವರು ಮೊದಲಿಗರಾದುದು, ಸರಿಗಮಪದಲ್ಲಿ ಕುರಿಗಾಹಿ ಹನುಮಂತಪ್ಪ ಎರಡನೇ ಸ್ಥಾನ ಪಡೆದುದು – ಇವೆಲ್ಲ ರಿಯಾಲಿಟಿ ಷೋಗಳು ಸೃಷ್ಟಿಸಿರುವ ಆಕಸ್ಮಿಕಗಳಂತೆ ಕಾಣಿಸಿದರೂ, ಈ ಕಾರ್ಯಕ್ರಮಗಳ ಮೂಲಕ ವಿಜೇತರು ಪಡೆದ ಜನಪ್ರಿಯತೆ ಮಾತ್ರ ಸುಲಭವಾಗಿ ಅಳತೆಗೆ ನಿಲುಕದು. ಹನುಮಂತಪ್ಪ ಅವರನ್ನೇ ನೋಡಿ: ಜನಪ್ರಿಯತೆಯನ್ನು ಅರಗಿಸಿಕೊಳ್ಳಲು



## ಕಾಮಿಡಿ-ರಿಯಾಲಿಟಿ

ಸದಾ ಹೊಸತರ ಹಂಬಲ–ಅನ್ವೇಷಣೆ ರಿಯಾಲಿಟಿ ಷೋಗಳ ವಿಶೇಷಗಳಲ್ಲೊಂದು. ಕ್ರಿಯಾಶೀಲವಾಗಿ ಯೋಚಿಸುವ, ಹೊಸತು ಎನ್ನುವ ಯಾವುದೇ ವಸ್ತು ಇಲ್ಲಿ ಕಲೆಯಾಗಿ ಕಾಣಿಸಿಕೊಳ್ಳಬಹುದು. ಆದಕ್ಕೆ ಜನಪ್ರಿಯ ಹಾಸ್ಯ ಕಾರ್ಯಕ್ರಮಗಳ ಅನುಕರಣೆ, ಮಿಮಿಕ್ರಿಯ ನಕಲು ಕೂಡ ಹೌದು. ರಾಜಕೀಯ, ಸಿನಿಮಾರಂಗ ಸೇರಿದಂತೆ ಖ್ಯಾತನಾಮರ ಹಾವಭಾವ– ದನಿಗಳ ಅನುಕರಣೆ ಯಥಾವತ್ತು ಅನುಕರಿಸುತ್ತಾರೆ. ಬಿಗ್‌ಬಾಸ್‌ನಲ್ಲಿ ಸ್ಪರ್ಧಿಯೊಬ್ಬ ಶಿವರಾಜ್ ಕುಮಾರ್ ಅವರನ್ನು ಅನುಕರಿಸಿ ಶಿವಣ್ಣ ಅವರನ್ನೇ ಬೆರಗುಗೊಳಿಸಿದ್ದರು. ಕಾಮಿಡಿ ಆಧಾರಿತ ಕಾರ್ಯಕ್ರಮಗಳಲ್ಲಿ ಮಿಮಿಕ್ರಿಗಳು ಅನುರಣಿಸುತ್ತವೆ. ಅಲ್ಲಿ ಮರೆದು ಹೋದ ದಿಗ್ಗಜರೂ ಮತ್ತೆ ಮತ್ತೆ ಉದಯಿಸಿ ಬರುತ್ತಾರೆ. ಶಂಕರ್‌ನಾಗ್, ರಾಜ್‌ಕುಮಾರ್, ಪ್ರಭಾಕರ್, ವಿಷ್ಣುವರ್ಧನ್, ಅಂಬರೀಶ್ ಹೀಗೆ ಹಲವರ ಮಿಮಿಕ್ರಿ ಕೂಡ ಕಾಮಿಡಿಗೆ ವಸ್ತು.

‘ಮಜಾಭಾರತ'ದಲ್ಲಿ ಯುವಕನೊಬ್ಬ ಥೇಟ್ ನಟ ದರ್ಶನ್ ಅಂತೆ ನಟಿಸಿ ಮೆಚ್ಚಿಗೆಗೆ ಪಾತ್ರವಾಗಿದ್ದಾರೆ.

ರಿಯಾಲಿಟಿ ಷೋಗಳಲ್ಲಿ ಮಕ್ಕಳ ಕೇಂದ್ರಿತ ಕಾರ್ಯಕ್ರಮವಳದ್ದೇ ಪ್ರತ್ಯೇಕ ಧಾರೆ. ಬಹುತೇಕ ಎಲ್ಲ ವಾಹಿನಿಗಳಲ್ಲಿಯೂ ಮಕ್ಕಳಿಗಾಗಿ ಹಲವು ಷೋಗಳು ಪ್ರಸಾರವಾಗುತ್ತಿವೆ. ಆ ಷೋಗಳಿಗಾಗಿ ಮಕ್ಕಳನ್ನು ಆಯ್ಕೆ ಮಾಡಲು, ಆಯ್ದ ಮಕ್ಕಳಿಗೆ ತರಬೇತಿ ನೀಡಲು ನುರಿತ ತಂತ್ರಜ್ಞರ ದೊಡ್ಡ ತಂಡಗಳೇ ಇವೆ. ತೆರೆಯ ಮೇಲೆ ಮಕ್ಕಳ ಆಟ, ಪಾಠ, ಲೀಲಾವಿನೋದಗಳನ್ನು ನೋಡುತ್ತಿದ್ದರೆ ಯಾರಿಗಾದರೂ ಕ್ಷಣ ಕಾಲ ಅಚ್ಚರಿಯೆನಿಸುತ್ತದೆ. ಮಕ್ಕಳ ಪ್ರತಿಭೆಯ ಬಗ್ಗೆ ಹೆಮ್ಮೆ ಮೂಡುತ್ತದೆ.